(SRI C. M. POONACHA) never fail in future also to press the matter of taking up this line as early as possible.

ಶ್ರೀ ಬಿ. ಡಿ. ಜತ್ತಿ.—ರಾಯಭಾಗದಿಂದ ಆಚೆ ಇರುವ ಪ್ರದೇಶಗಳಿಗೂ ಅನುಕೂಲವಾಗಿರುವ ರೀತಿಯಲ್ಲಿ ರೈಲು ಮಾರ್ಗವನ್ನು ಕಟ್ಟಬೇಕೆಂಬ ಸೂಚನೆ ಸರ್ಕಾರದ ಗಮನದಲ್ಲಿಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಹಾಗೆ ಒಂದು ಸೂಚನೆ ಇದೆ. ಈಗ ಸರ್ವೇ ರಾಯಭಾಗದವರೆಗೂ ಮಾಡಿದೆ.

Sri G. DUGGAPPA.—May I know whether any assurance was given by the Railway Minister at the time of the meeting of the Chief Ministers of the different States ?

Sri C. M. POONACHA.—The railway authorities were very sympathetic and particularly the Railway Minister was very sympathetic to the demands and the requests made by the State Governments through the Chief Ministers of their States.

Survey of Somedyapanahalli, Kanakapura Taluk.

Q.—1091. Sri M. LINGE GOWDA (Kanakapura).—

Will the Government be pleased to state :—

(*a*) whether Somedyapanahalli, Kanakapura Taluk, has been surveyed ;

(*b*) whether it has also come to their notice that records of survey conducted in the presence of ryots are quite different from the ones that are forwarded to them ?

A.—Sri M. P. PATIL (Minister for Revenue).—

(*a*) Yes.

(*b*) No.

ಶ್ರೀ ಎಂ. ಲಿಂಗೇಗೌಡ.—ಸೋಮೇದ್ಯಾಪನಹಳ್ಳಿ ಸರ್ವೆ ಆಗಿರುವುದು ಸರ್ಕಾರದವರು ತಿಳಿದುಕೊಂಡಿದ್ದಾರೆಯೇ ?

*ಶ್ರೀ ಎಂ. ಪಿ. ಪಾಟೀಲ್.—ಅದು ನನಗೆ ಗೊತ್ತಿಲ್ಲ. I want notice.

ಶ್ರೀ ಎಂ. ಲಿಂಗೇಗೌಡ.—ಇದು ರೈತರಿಗೆ ತಾತ ಮುತ್ತಾತನ ಕಾಲದಿಂದ ಬಂದಂಥ ಹಕ್ಕು. ಈ ಹಕ್ಕನ್ನು ಸರ್ವೇ ಡಿಪಾರ್ಟುಮೆಂಟಿನ ಮುಖೇನ ಇನಾಂದಾರರ ಹೆಸರಿನಲ್ಲಿ ಸರ್ವೆ ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ.

ಶ್ರೀ ಎಂ. ಲಿಂಗೇಗೌಡ.—ಈ ಕಾರ್ಯ ಮಾಡುವಾಗ, ಸರ್ವೇ ಸೂಪರಿಂಟೆಂಡೆಂಟ್, ಡಿಸ್ಟ್ರಿಕ್ಟ್ ಸರ್ವೇ ಆಫೀಸರ್, ಸೂಪರ್‌ವೈಸರ್, ಸರ್ವೇ ಅಮಲ್ದಾರರೂ, ಎಲ್ಲರೂ ಒಂದಾಗಿ ರೈತರಿಗೆ ಮೋಸ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ.

ಶ್ರೀ ಎಂ. ಲಿಂಗೇಗೌಡ.—ತಮಗೆ ಆ ವಿಷಯದಲ್ಲಿ ಸರ್ಕಾರಕ್ಕೆ ರಿಜಿಸ್ಟರ್ ಮುಖೇನ ಪತ್ರಗಳು ಬಂದಿಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಯಾವುದೇ ಪತ್ರ ಬಂದಿಲ್ಲ.

ಶ್ರೀ ಎಂ. ಲಿಂಗೇಗೌಡ.—ಅಂತಹ ನಿವೇಶಗಳನ್ನು ತಮ್ಮ ಗಮನಕ್ಕೆ ತಂದರೆ ದಯವಿಟ್ಟು ಎನ್‌ಕ್ವೈರಿ ಮಾಡುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಹೌದು.

Preserving of Fuel in the Forest at Chikmagalur.

Q.—1161. Sri A. M. BASAVE GOWDA (Chikmagalur).—

Will the Government be pleased to state :—

whether it has come to their notice that a large part of the jungle is being destroyed for fuel ; if so, what steps are being taken by Government for the afforestation of the same ?

A.—Sri H. S. RUDRAPPA (Minister for Agriculture).—

No.

ಶ್ರೀ ಎ. ಎಂ. ಬಸವೇಗೌಡ.—ನನ್ನ ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಹಾಗಾದರೆ ಗಿಡಗಳನ್ನು ಬೆಳೆಸುವುದಕ್ಕೆ ಕಾಡಿನಲ್ಲಿ ಅನುಕೂಲವಾಗುತ್ತಾ ಇಲ್ಲ. ಆಲ್ಲಿ ಹೆಚ್ಚು ಭಾಗ ನಾಶವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ತಾವು ಹೇಳಿದ ಪ್ರಕಾರ ನಾಶವಾಗುತ್ತಿಲ್ಲ.

ಶ್ರೀ ಎ. ಎಂ. ಬಸವೇಗೌಡ.—ಅರಣ್ಯದಲ್ಲಿ ಹೆಚ್ಚು ಭಾಗ ನಾಶವಾಗುತ್ತಿದೆಯೆಂದು ತಮ್ಮ ಗಮನಕ್ಕೆ ತಂದರೆ, ಆ ಕಾರ್ಯವನ್ನು ಪುನರುಜ್ಜೀವನಗೊಳಿಸಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಎಂ. ಬಸವೇಗೌಡ.—ಅವೇನು ಕಾರ್ಯಕ್ರಮಗಳು ?

Sri H. S. RUDRAPPA.—There are afforestation schemes in all the areas where it is absolutely necessary. In the Second Five-Year Plan we have provided Rs. 77·31 lakhs for afforestation schemes to plant about 1,01,750 acres.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಇದರಲ್ಲಿ ಎಷ್ಟು ಪರ್ಸೆಂಟೇಜ್ ನಮ್ಮ ತಾಲ್ಲೂಕಿಗೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಎನ್. ರುದ್ರಪ್ಪ.—ತಿಪಟೂರಿನಲ್ಲಿ ಆದಷ್ಟು ಮಳೆ ಇಲ್ಲಿ ಬರಲಿಲ್ಲ. ಚೆನ್ನಾಗಿ ಮಳೆಯಾದರೆ ಗಿಡಗಳು ಚೆನ್ನಾಗಿ ಬೆಳೆಯುತ್ತವೆ.

Dr. R. NAGAN GOWDA.—May I know how many acres Government propose to afforest in Chickmagalur District under the Second Five-Year Plan?

Sri H. S. RUDRAPPA.—one hundred acres in 1957-58

ಶ್ರೀ ಎಂ. ರಾಮಪ್ಪ.—ಇತರ ಇಲಾಖೆಗಳಿಗೆ ಕಡಿಮೆ ಎಂದು ಹೇಳಿದಿರಿ. ಯಾವ ಇಲಾಖೆಗೆ ಜಾಸ್ತಿ ಇದೆ?

ಶ್ರೀ ಎಚ್. ಎನ್. ರುದ್ರಪ್ಪ.—ಅದು ತಮಗೇ ಗೊತ್ತು.

ಶ್ರೀ ಟಿ. ಆರ್. ಪಟವೇಶ್ವರಯ್ಯ.—ಅರಣ್ಯ ಬೆಳೆಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದೆ. ಇದರಲ್ಲಿ ಖಾಸಗೀಯವರಿಗೆ ಅವಕಾಶವನ್ನು ಕಲ್ಪಿಸಿ ಕೊಡುತ್ತೀರೋ?

ಶ್ರೀ ಎಚ್. ಎನ್. ರುದ್ರಪ್ಪ.—ಕೆಲವರಿಗೆ ಉಂಟು. ಎಲ್ಲಿ ಯಾರ್ಯಾರು ಮುಂದೆ ಬಂದು ಅರಣ್ಯವನ್ನು ಬೆಳೆಸುತ್ತೇವೆಂದು ಹೇಳುತ್ತಾರೋ ಅವರಿಗೆ ಅವಕಾಶ ಕೊಡುತ್ತೇವೆಂದು ಹೇಳಿದೆ.

ಶ್ರೀ ಸಿ ಕೆ. ರಾಜಯ್ಯಶೆಟ್ಟಿ.—ಕಳೆದ 10 ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಫಾರೆಸ್ಟೇಷನ್ ಆಗಿರುವ ಪರಿಯಾದಲ್ಲಿ ಸರ್ಕಾರದವರು ಸೌದೆಯನ್ನು ಕೂಪ್‌ಗಳಾಗಿ ಮಾಡಿ ಮಾರಿದ್ದಾರೆಯೇ?

ಶ್ರೀ ಎಚ್. ಎನ್. ರುದ್ರಪ್ಪ.—ನೋಟೀಸ್.

ಶ್ರೀ ಕೆ. ಎಚ್. ನರಸಿಂಹಯ್ಯ.—ಈ ಜಿಲ್ಲೆಯಲ್ಲಿ ಸೌದೆ ಅಭಾವದ ದೆಸೆಯಿಂದ ಬೇರೆ ಕಡೆ ಇದನ್ನು ಸಾಗಿಸಕೂಡದು ಎಂದು ಸರ್ಕಾರದವರು ಆರ್ಡರ್ ಮಾಡಿದ್ದಾರೆಯೇ?

ಶ್ರೀ ಎಚ್. ಎನ್. ರುದ್ರಪ್ಪ.—ಇಲ್ಲ.

Sri A. R. BADRI NARAYAN.—Is the Government satisfied that the afforestation is commensurate with the utilisation of fuel and charcoal ?

Sri H. S. RUDRAPPA.—Government is not completely satisfied because disafforestation is on a larger scale now. Therefore, Government is making honest effort to catch up with the programme.

Sri G. DUGGAPPA.—Does Government encourage educational institutions to take up afforestation schemes?

Sri H. S. RUDRAPPA.—As Hon'ble Members are aware, we have made an earnest appeal to the educational institutions to afforest some of the areas. During 'Vanamahotsava' we have supplied them free plants also.

ಶ್ರೀ ಎಂ. ಲಿಂಗೇಗೌಡ.—ಸೌದೆಗೋಸ್ಕರ ಕಾಡನ್ನು ಕಡಿಯುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ ಎಂದು ಜವಾಬು ಹೇಳಿದ್ದೀರಿ. ಹಾಗಾದರೆ ಹಸೀ ಸೌದೆ ಕಡಿಯುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಾ?

ಶ್ರೀ ಎಚ್. ಎನ್. ರುದ್ರಪ್ಪ.—ಕೆಲವು ಕಡೆ ಕೊಟ್ಟಿದ್ದೇವೆ.

ಶ್ರೀ ಎಂ. ಲಿಂಗೇಗೌಡ.—ಅಂತಹವುಗಳಿಗೆ ಲೈಸೆನ್ಸ್ ಕೊಟ್ಟಿದ್ದೀರಾ?

ಶ್ರೀ ಎಚ್. ಎನ್. ರುದ್ರಪ್ಪ.—ಕೊಟ್ಟಿದ್ದೇವೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ತುಮಕೂರು ಜಿಲ್ಲೆಯಲ್ಲಿ ಬರೀ ಒಣಗಿದ ಸೌದೆ ಕಡಿಯಬೇಕೆಂದು ಆರ್ಡರ್‌ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎನ್. ರುದ್ರಪ್ಪ.—ಒಣಗಿದ ಸೌದೆ ಮಾತ್ರ ಕಡಿಯಬೇಕೆಂದು ಹೇಳಿರುವುದು ನಿಜ.

ಶ್ರೀ ಕೆ. ಎಲ್. ನರಸಿಂಹಯ್ಯ.—ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆಯೆಂದು ಅರ್ಜಿಗಳು ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎನ್. ರುದ್ರಪ್ಪ.—ಇಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಗಿಡಗಳನ್ನು ನಾಟಿ ಹಾಕುವುದು 'ವನಮಹೋತ್ಸವ' ಕಾಲದಲ್ಲಿ ಅಲ್ಲವೇ?

ಶ್ರೀ ಎಚ್. ಎನ್. ರುದ್ರಪ್ಪ.—ತಾವು ಕೇಳಿದ್ದು ಗೊತ್ತಾಗಲಿಲ್ಲ.

ಶ್ರೀ ಕೆ. ಪಿ. ರೇವಣಸಿದ ಪ್ಪ.—ಶೇಕಡಾ 99 ಭಾಗದಷ್ಟು ಗಿಡಗಳಲ್ಲಿ ಒಂದೂ ಇಲ್ಲವೆಂದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ಎನ್. ರುದ್ರಪ್ಪ.—ಅದು ತಿಳಿಯದು

ಶ್ರೀ ಕೆ. ಪಿ. ರೇವಣಸಿದ ಪ್ಪ.—ನನ್ನ ಪ್ರಶ್ನೆಗೂ ತಮ್ಮ ಉತ್ತರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಏಕೆಂದರೆ ನನ್ನ ಪ್ರಶ್ನೆಗೆ ಇಂತಹ ಉತ್ತರ ಹೇಳಿದರೆ ಯಾವ ರೀತಿ ಅರ್ಥವಾಗುತ್ತದೆ?

ಶ್ರೀ ಎಚ್. ಎನ್. ರುದ್ರಪ್ಪ.—ಸೌದೆಗೋಸ್ಕರ ಗಿಡಗಳನ್ನು ಕಡಿಯಲೇ ಬೇಕಾಗುತ್ತದೆ. ಡಿಸ್ಯಾಯ್ ಆಗಿಲ್ಲವೆಂದು ಹೇಳಿದೆ. ಅದಕ್ಕೂ ಇದಕ್ಕೂ ವ್ಯತ್ಯಾಸ ಬಹಳವಿದೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಫಾರೆಸ್ಟ್ ಆಫೀಸರ್ ಮತ್ತು ಮರದ ಕಾಂಟ್ರಾಕ್ಟರ್ ಒಂದಾಗಿ ಅನೇಕ ಮರಗಳನ್ನು ಸಾಗಿಸುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎನ್ ರುದ್ರಪ್ಪ.—ಬಂದಿಲ್ಲ. ತಾವು ತಿಳಿಸಬೇಕು.

ಶ್ರೀ ಎಸ್. ಜಿ. ನರಸಿಂಹೇಗೌಡ.—ಹಾಗೇನಾದರೂ ತಮ್ಮ ಗಮನಕ್ಕೆ ತಂದರೆ, ಅದನ್ನು ಸೀರಿಯಸ್ಸಾಗಿ ಪರಿಗಣಿಸುತ್ತೀರಾ?

ಶ್ರೀ ಎಚ್. ಎನ್. ರುದ್ರಪ್ಪ.—ಖಂಡಿತವಾಗಿ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಲಂಚ ತೆಗೆದು ಕೊಳ್ಳುವ ಆಫೀಸುಗಳಲ್ಲಿ ಫಾರೆಸ್ಟ್ ಆಫೀಸೂ ಸಹ ಒಂದು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎನ್. ರುದ್ರಪ್ಪ.—ಬಂದಿದೆ. ತಾವೆಲ್ಲರೂ ಸಹಕಾರ ಮಾಡಿದರೆ, ಅದನ್ನು ವಿರೋಧಿಸುವುದಕ್ಕೆ ಸಾಧ್ಯ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಲಂಚಗಳು ಹೆಚ್ಚಿಗೆ ಫಾರೆಸ್ಟ್ ಆಫೀಸಿನಲ್ಲಿ ನಡೆಯುತ್ತಿರುವುದರಿಂದ ತಾವೇನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಅಷ್ಟಿಲ್ಲ. ತಾವು ಹೇಳಿದರೆ ವಿಚಾರಮಾಡುತ್ತೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಅಂತಹ ಕೇಸುಗಳು ಬರುತ್ತವೆ; ಇಲ್ಲ ಎಂದು ಹೇಳುವುದು ನ್ಯಾಯವಾದುದಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ತಾವು ಹೇಳಿದಷ್ಟು ಇಲ್ಲ. ಕೆಲವು ಅಂತಹ ಕೇಸುಗಳು ಬರುತ್ತಿವೆ ಎಂಬುದು ನಮಗೆ ಗೊತ್ತಿದೆ.

ಶ್ರೀ ಕುಂದೂರು ರುದ್ರಪ್ಪ.—ಕೆಲವು ಕಡೆಗಳಲ್ಲಿ ರಾತ್ರಿಹೊತ್ತು ಕಾಡಿನಲ್ಲಿ ಮರಗಳನ್ನು ಕಡಿದು ತರೆ ಹೊರೆ ಮೇಲೆ ಕದ್ದು ನಾಟಾಗಳನ್ನು ಸಾಗಿಸುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಈ ಉಪಪ್ರಶ್ನೆ ಈ ಪ್ರಶ್ನೆಗೆ ಸಂಬಂಧ ಪಡುವುದಿಲ್ಲ. ಅಂತೂ ಆ ರೀತಿ ಕಳ್ಳತನದಲ್ಲಿ ನಾಟಾ ಹೋಗುತ್ತಿದೆಯೆಂದು ಕೆಲವು ಕಡೆಗಳಿಂದ ದೂರು ಬಂದಿದೆ.

ಶ್ರೀ ಕುಂದೂರು ರುದ್ರಪ್ಪ.—ಆ ರೀತಿ ಕಳ್ಳತನದಲ್ಲಿ ಕಾಡಿನಲ್ಲಿರತಕ್ಕ ಮರಗಳನ್ನು ಕಡಿಯತಕ್ಕವರನ್ನು ಹಿಡಿಯಲು ಸರ್ಕಾರ ಏನುಕಾರ್ಯಕ್ರಮ ಕೈಗೊಂಡಿದೆ?

ಶ್ರೀ ಎಚ್. ಎಸ್. ರುದ್ರಪ್ಪ.—ದೇಶದಲ್ಲಿ ಈ ಕಳ್ಳತನ ಸಂಪೂರ್ಣವಾಗಿ ನಿಲ್ಲಬೇಕಾಗಿದ್ದರೆ ಸರ್ಕಾರದವರಿಗೆ ಸಾರ್ವಜನಿಕರ ಸಹಕಾರ ದೊರೆಯದೆ ಮಾಡಲು ಖಂಡಿತ ಸಾಧ್ಯವಿಲ್ಲ. ಆದರೆ ಸರ್ಕಾರ ಈ ಬಗ್ಗೆ ಅನೇಕ ಪ್ರಯತ್ನಗಳನ್ನು ನಡೆಸಿದ್ದಾಗ್ಯೂ ಈ ಕಳ್ಳತನ ಇನ್ನೂ ಸಂಪೂರ್ಣವಾಗಿ ನಿಂತಿಲ್ಲ. ಈ ರೀತಿ ನಾಟಾ ಕಳವು ಈಗ ಪ್ರಶ್ನೆ ಕೇಳಿರುವ ಮಾನ್ಯ ಸದಸ್ಯರ ತಾಲ್ಲೂಕಿನಲ್ಲೇ ನಡೆಯುತ್ತಿದೆಯೆಂಬುದಾಗಿ ನಾನೂ ಸಹ ಕೇಳಿದ್ದೇನೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಹೀಗೆ ಕಳ್ಳತನದಲ್ಲಿ ಇನ್ನೂ ಬೆಲೆಬಾಳತಕ್ಕಂಥ ಅನೇಕ ಮರಗಳನ್ನು ತುಂಡುತುಂಡುಗಳಾಗಿ ಕತ್ತರಿಸಿ ಅನೇಕ ಕಡೆಗಳಲ್ಲಿ ಸಾಗಿಸುತ್ತಿದ್ದಾರೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ. ಆದರೆ ಕೆಲವು ಕಡೆ ಕೆಲಸಕ್ಕೆ ಬಾರದ ದಿಂಡಿಗ ಮತ್ತು ಬೀಟೆ ಮರಗಳಿದ್ದಾಗ್ಯೂ ಅವುಗಳನ್ನು ಕತ್ತರಿಸದಂತೆ ನೋಡಿಕೊಳ್ಳಬೇಕೆಂದು ಇಲಾಖೆಗೆ ತಿಳಿವಳಿಕೆ ಕೊಟ್ಟಿದ್ದೇವೆ.

ಶ್ರೀ ಎಂ. ಲಿಂಗೇಗೌಡ.—ಕನಕಪುರ ತಾಲ್ಲೂಕಿನಲ್ಲಿ ಹಸಿರುಮರಗಳನ್ನಾಗಲಿ ಅಥವಾ ಒಣಮರಗಳನ್ನಾಗಲಿ ಕಡಿಯಲೇ ಕೂಡದೆಂಬುದಾಗಿ ಸರ್ಕಾರದವರು ಏನಾದರೊಂದು ಆರ್ಡರನ್ನು ಹೊರಡಿಸಿದ್ದಾರೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ.

ಶ್ರೀ ಎಂ. ಲಿಂಗೇಗೌಡ.—ಕನಕಪುರ ತಾಲ್ಲೂಕು ಹಾರೋಹಳ್ಳಿ—ಮಳಲವಾಡಿ ಇತ್ಯಾದಿ ಪ್ರಾಂತ್ಯದಲ್ಲಿ ಹೀಗೊಂದು ನಿರ್ಬಂಧ ಹಾಕಿರುವುದರಿಂದ ಅಲ್ಲಿಯ ರೈತರಿಗೆ ತುಂಬ ತೊಂದರೆಯಾಗಿದೆಯೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ. ಅಂಥ ವಿಚಾರಗಳಿದ್ದರೆ ಅದನ್ನು ತಾವು ನನ್ನ ಗಮನಕ್ಕೆ ತಂದರೆ ನಾನು ವಿಚಾರಮಾಡುತ್ತೇನೆ.

Number of Brahmin and non-Brahmin employees in Raichur

Q.—1263. **Dr. Sardar B. K. NAGUR** (Bijapur).—

Will the Government be pleased to state :—

the number of Brahmin and non-Brahmin employees working in the Raichur Collectorate ?

A.— **Sri M. P. PATIL** (Minister for Revenue).—

Brahmins	...	29
Non-Brahmins	...	29

ಶ್ರೀ ಬಿ. ಕೆ. ನಾಗೂರ್.—ಸರ್ಕಾರದವರು ಈಗ ಅಚ್ಚುಹಾಕಿಸಿ ಒದಗಿಸಿರುವ ಉತ್ತರದಲ್ಲಿ ಬ್ರಾಹ್ಮಣರು ಇಪ್ಪತ್ತೊಂಭತ್ತು ಬ್ರಾಹ್ಮಣೇತರರು ಇಪ್ಪತ್ತೊಂಭತ್ತು ಎಂದು ಹೇಳಲಾಗಿದೆ. ಇದರಲ್ಲಿ ಪಜೇರ್, ಪಟವಾರಿ, ಶಿಪಾಯಿಗಳೆಲ್ಲರನ್ನೂ ಒಳಗೊಂಡಿದೆಯೇ?

*ಶ್ರೀ ಎಂ. ಪಿ. ಪಾಟೀಲ್.—ಈ ಪ್ರಶ್ನೆ ಕಲೆಕ್ಟರ್ ಅವರ ಕಛೇರಿಗೆ ಸಂಬಂಧಪಟ್ಟದ್ದು. ಇದರಲ್ಲಿ ಈ ಉಪಪ್ರಶ್ನೆ ಹೇಗೆ ಉದ್ಭವವಾಗುತ್ತದೆ?

ಶ್ರೀ ಶಂಕರಗೌಡ ಪೈ. ಪಾಟೀಲ್.—ಸರ್ಕಾರದ ಉತ್ತರದಲ್ಲಿ 29 ಜನ ಹಿಂದುಳಿದ ಜನಾಂಗದವರೆಂದು ಹೇಳಿದ್ದಾರೆ. ಇವರಲ್ಲಿ ಹರಿಜನರೆಷ್ಟು ಮಂದಿ ಇದ್ದಾರೆ?

ಶ್ರೀ ಎಂ. ಪಿ. ಪಾಟೀಲ್.—ನೋಟೀಸ್.

ಶ್ರೀ ಶಂಕರಗೌಡ ಪೈ. ಪಾಟೀಲ್.—ಇಂಥಿಂಥ ಕಛೇರಿಯಲ್ಲಿ ಇಂಥಿಂಥ ಜಾತಿಯರು ಇಷ್ಟಿಷ್ಟೇ ಇರಬೇಕೆಂಬ ನೀತಿ ಇದೆಯೇ?

ಶ್ರೀ ಎಂ. ಪಿ. ಪಾಟೀಲ್.—ಆ ರೀತಿ ಏನೂ ಇಲ್ಲ.

Sri V. P. DEENADAYALU NAIDU.—While making these promotions, is there no ratio of 1 : 4 being observed as is done at other times ?

Sri M. P. PATIL.—These are old appointments of Hyderabad State.

ಶ್ರೀ ಎಚ್. ಜಿ. ನರಸಿಂಹೇಗೌಡ.—ಆ ಕಛೇರಿಯಲ್ಲಿ ಈ 29 ಜನ ಬ್ರಾಹ್ಮಣರು ಯಾವಾಗಿನಿಂದ ಇದ್ದಾರೆ?

ಶ್ರೀ ಎಂ. ಪಿ. ಪಾಟೀಲ್.—ಅವರು ಯಾವಾಗಿನಿಂದಿದ್ದಾರೆಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಆದರೆ ಅಲ್ಲಿ ಈ ವಿಚಾರ ನಡೆಸಿದ ಕಾಲಕ್ಕೆ ಇಷ್ಟು ಜನರಿದ್ದರೆಂದು ತಿಳಿದು ಬಂದಿದೆ.

Sri G. DUGGAPPA.—Would the Minister give details of these 29 employees ?

Sri M. P. PATIL.—Notice.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ 29 ಜನ ಬ್ರಾಹ್ಮಣರಲ್ಲಿ ಮತ್ತು 29 ಜನ ಬ್ರಾಹ್ಮಣೇತರರಲ್ಲಿ ಎಷ್ಟು ಜನ ಫಸ್ಟ್ ಡಿವಿಜ಼ನ್ ಗುಮಾನ್ತರಿದ್ದಾರೆ ಮತ್ತು ಎಷ್ಟು ಜನ ಸೆಕೆಂಡ್ ಡಿವಿಜ಼ನ್ ಗುಮಾನ್ತರಿದ್ದಾರೆ?

ಶ್ರೀ ಎಂ. ಪಿ. ಪಾಟೀಲ್.—ನೋಟೀಸ್.